ನನ್ನ ಬಾಳನೌಕೆ ಬಿರುಗಾಳಿಗೆ ಸಿಕ್ಕು ನುಜ್ಜುಗುಜ್ಜಾಗಿದೆ. ಸಂತೋಷ–ಸಂಭ್ರಮಗಳಿಂದ ಜೀಕುತ್ತಿದ್ದ ನನ್ನ ಬದುಕಿನ ಜೋಕಾಲಿಯ ನೇಣು ಹರಿದು ನೆಲಕ್ಕೆ ಅಪ್ಪಳಿಸಿದೆ. ಉಳಿದಿರುವುದು ಕತ್ತಲು, ಬರೀ ಕಾರ್ಗತ್ತಲು.

ನಂಬಲು ಸಾಧ್ಯವೇ ಆಗುತ್ತಿಲ್ಲ. ಸಾಮ್ರಾಟ ಅಶೋಕ, ದೇವಾನಾಂಪ್ರಿಯ, ಪ್ರಿಯದರ್ಶಿ ಅಶೋಕ ತನ್ನ ಪ್ರೀತಿಯ ಮಗ ಕುಣಾಲನಿಗೆ 'ಕುರುಡನಾಗು' ಎಂದು ಆದೇಶ ಕಳಿಸಿದ್ದು; ಆತನ ಆದೇಶವನ್ನು ಚಾಚೂ ತಪ್ಪದೆ ಪಾಲಿಸಿದ ಮಗ ತನ್ನ ಸೇವಕರನ್ನು ಕರೆದು, ಉರಿಯುವ ಅಗ್ಗಿಷ್ಟಿಕೆ ತರಿಸಿ, ಕಬ್ಬಿಣದ ಸರಳನ್ನು ಕೆಂಪಗೆ ಕಾಯಿಸಿ, ತನ್ನ ಎರಡೂ ಕಣ್ಣುಗಳಿಗೆ ಇರಿದುಕೊಂಡು ಕುರುಡನಾದದ್ದು. ಅದನ್ನು ಕಣ್ಣಾರೆ ಕಂಡ ಮಗ ಸಂಪ್ರತಿ ಕಿಟಾರನೆ ಕಿರುಚಿ ಮೂರ್ಛೆ ಹೋದದ್ದು, ಸೇವಕರು ಹಾಗೂ ಸಚಿವ ಮಂಡಲದ ಸದಸ್ಯರೆಲ್ಲ ಸುದ್ದಿ ಕೇಳಿ ದಿಗ್ಭ್ರಾಂತರಾದದ್ದು... ಒಂದರ ಮೇಲೊಂದು ಭೀಕರ ಸುದ್ದಿಗಳು ಕಿವಿದೆರೆಗೆ ಅಪ್ಪಳಿಸಿ ಮನಸ್ಸು ಮರಗಟ್ಟಿ ಹೋಗಿದೆ.

ಇಲ್ಲ, ನಾನು ಸ್ವಲ್ಪ ಎಚ್ಚರವಹಿಸಬೇಕಿತ್ತು. ರಾಣಿ ತಿಷ್ಯರಕ್ಷಿತಾ ಒಂದು ಮಾತೂ ತಿಳಿಸದೆ, ನಿಂತ ನಿಲುವಿನಲ್ಲಿಯೇ ಪಾಟಲಿಪುತ್ರಕ್ಕೆ ಹೊರಟು ಹೋದಾಗ, ಆಕೆಯ ನಿರ್ಗಮನದ ನಂತರ ಭ್ರಮಿಷ್ಠನಂತೆ ವರ್ತಿಸುತ್ತಿದ್ದ ಕುಣಾಲನ ನಡವಳಿಕೆ ಗಮನಿಸಿದಾಗ ಮನಸ್ಸು ಕೇಡನ್ನು ಶಂಕಿಸಿತಾದರೂ, ಎಚ್ಚರಿಕೆವಹಿಸಲಿಲ್ಲ. ಹಾಗೆಂದು ನಾನು ನನ್ನ ಸಮಾಧಾನಕ್ಕೆ ಅಂದುಕೊಳ್ಳಬಹುದು, ಅಷ್ಟೇ. ರಾಜಮುದ್ರೆಯಿರುವ ರಾಜಾಜ್ಞೆ... "ಕುಣಾಲಾ, ಕುರುಡನಾಗು" ಎಂಬ ಆದೇಶವಿರುವ ರಾಜಾಜ್ಞೆ!! ಸಾಮಾನ್ಯ ಹೆಣ್ಣು ನಾನೇನು ಮಾಡಬಲ್ಲವಳಾಗಿದ್ದೆ?

ರಕ್ತ ಒಸರುತ್ತಿದ್ದ ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡು ಬಂದ ಕುಣಾಲ, "ದೇವಿ, ಈ ರಾಜ್ಯದ ಋಣ ತೀರಿತು. ಕುರುಡನಾದವನು ರಾಜ್ಯಭಾರವನೆಂತು ಮಾಡಿಯಾನು? ಮಗನನ್ನು ಕರೆದುಕೊಂಡು ನಡೆ. ನಮ್ಮ ಉಪಜೀವನಕ್ಕೆ ನಾನು ಕಲಿತ ಸಂಗೀತವಿದೆ. ನನ್ನ ತಂದೆಯ ಸಾಮ್ರಾಜ್ಯ ವಿಶಾಲವಾಗಿದೆ; ಸುಸಂಸ್ಕೃತ, ಸಂಪನ್ನ ಪ್ರಜೆಗಳಿದ್ದಾರೆ. ನಾವಿಬ್ಬರೂ ಹಾಡುತ್ತ ಬೀದಿಗಳಲ್ಲಿ ತಿರುಗಾಡಿದರೆ ಮೂವರ ತುತ್ತಿನ ಚೀಲವನ್ನು ತುಂಬುವಷ್ಟು ಅನ್ನವನ್ನು ಯಾರಾದರೂ ಕರುಣಿಸುತ್ತಾರೆ" ಎಂದು ನುಡಿಯುತ್ತಿರುವಾಗ, ಅವರ ಖಚಿತ ನಿರ್ಧಾರದೆದುರು ಏನೂ ಹೇಳದಾದೆ. ಜ್ವರದಲ್ಲಿ ಬಳಲುತ್ತಿದ್ದ ಮಗನನ್ನು ಎತ್ತಿಕೊಂಡು ತಕ್ಷಶಿಲೆಯಿಂದ ಹೊರನಡೆದೆ! ನನ್ನ ಹೆಗಲಿಗೆ ಒಂದು ಕೈಯೂರಿ ಇನ್ನೊಂದು ಕೈಯಲ್ಲಿ ಕೋಲು ಹಿಡಿದ ಕುಣಾಲ ನನ್ನ ಬೆಂಬತ್ತಿದ.

## ತಿಷ್ಯರಕ್ಷಿತಾ

ಅರಮನೆಯ ಅಂಧಕಾರದಲ್ಲಿ ಒಬ್ಬಳೇ ಕುಳಿತಿದ್ದೇನೆ; ಪಿಶಾಚಿಯಂತೆ. ಕಣ್ಣು ಮುಚ್ಚಿದರೆ ಸಾಕು, ಕುಣಾಲನ ಮೋಹಕ ಕಣ್ಣುಗಳು... ನೀಲಸಾಗರದಂತಿದ್ದ ಪ್ರಶಾಂತ ಕಣ್ಣುಗಳು. ಜಗದ ಚೆಲುವನ್ನೆಲ್ಲ ಒಳಗೊಂಡ ರಸಾರ್ದ್ರ ಕಣ್ಣುಗಳು... ನಂತರ ಕಾಯ್ದ ಕಬ್ಬಿಣದ ಸಲಾಕೆಗೆ ಸಿಲುಕಿ ರಕ್ತ ಒಸರುತ್ತಿದ್ದ ಕಣ್ಣುಗಳು.

ಕೈಯಲ್ಲಿ ವಿಷದ ಬಟ್ಟಲು ಹಿಡಿದುಕೊಂಡಿರುವೆ. ಕಾರ್ಕೋಟಕ ಗರಳಕ್ಕೆ ಸಮನಾದ ವಿಷ. ನಾಲಿಗೆಗೆ ಒಂದು ತೊಟ್ಟು ಸೋಂಕಿದರೂ ಸಾಕು, ಮರುಕ್ಷಣ ನನ್ನನ್ನು ಆಹುತಿ ತೆಗೆದುಕೊಳ್ಳುವ ವಿಷ. ನನ್ನೆಲ್ಲ ನೋವು ಯಾತನೆಗಳಿಗೆ ಸಾಂತ್ವನ ನೀಡುವ ವಿಷ.

ಅಲ್ಲಿ ಕೌರ್ವಾಕಿಯ ಅಂತಃಪುರದಲ್ಲಿ ವೃದ್ಧ ಅಶೋಕ ಎದೆ ಬಿರಿದು ಹೋಗುವಂತೆ ರೋದಿಸುತ್ತ ಮಲಗಿದ್ದಾನೆ. ಉಸಿರಿಗೊಮ್ಮೆ, "ಮಗು, ಕುಣಾಲ, ಹೀಗೇಕೆ ಮಾಡಿದೆ ಕಂದಾ? ಏಕೆ ನಿನ್ನ ಕಮಲದಂಥ ಕಣ್ಣುಗಳನ್ನು ಕಾಯ್ದ ಸಲಾಕೆಯಿಂದ ಇರಿದುಕೊಂಡೆಯೋ? ಅದೆಷ್ಟು ಯಾತನೆ ಅನುಭವಿಸಿದೆಯೋ ಕೂಸೇ" ಎಂದು ಹಲುಬುತ್ತಿದ್ದಾನೆ. ಆತನಿಗೇನು ಗೊತ್ತು, ಆತ ಕಳುಹಿಸಿದ ರಾಜಾಜ್ಞೆ, ಕುಣಾಲನಿಗೆ ತಲುಪುವ ಮುನ್ನ ನನ್ನ ಕೈಸೇರಿತ್ತು ಎಂಬುದು? ಪಾಲಿ ಭಾಷೆಯಲ್ಲಿಯ ಆ ಪತ್ರದಲ್ಲಿಯ 'ಅಧಿಲು' (ಅಧ್ಯಯನ ಮಾಡು) ಎಂಬ ಪದವನ್ನು ನಾನು 'ಅಂಧಿಲು' (ಕುರುಡನಾಗು) ಎಂದು ತಿದ್ದಿದ್ದು.

ನನ್ನನ್ನು ನೋಡಲು ತಿರಸ್ಕರಿಸಿದ ಆ ಕಣ್ಣುಗಳು... ಆ ಕಣ್ಣುಗಳು... ನಿಧಾನವಾಗಿ ವಿಷದ ಬಟ್ಟಲನ್ನು ಕೈಗೆತ್ತಿಕೊಂಡು ತುಟಿಗಳತ್ತ ಒಯ್ದೆ.

●